IN THE COURT OF THE PRINCIPAL SENIOR CIVIL JUDGE, AT DEVANAHALLI
O.S. NO. 407/2020

BETWEEN : Venkatappa ...PLAINTIFF
AND: Bheemanna by his LR's ...DEFENDANTS

SUMMONS TO DEFENDANT

1(a) Sri. K. B. Shivakumar, S/o. late. Bheemanna, aged about 33 years, R/at. Kolipura Village, Jala Hobli, Bengaluru North Taluk.

Whereas plaintiff have instituted the above Case against you for the relief of Declaration and cancellation., you are hereby summoned to appear in this court in person or by a pleader duly instructed and able to answer all material questions, on **05-09-2026** at 11:00 A.M. to answer claims and as the day fixed for your appearance is appointed for the final disposal of the case, take notice that, in default of your appearance on the day afore mentioned, the matter will be heard and determined on your absence placing you as ex-parte.

All that piece and parcel of the property bearing Sy. No.229, measuring to an extent of 1 acre of land out of which 4 acres of land, situated at Aludoddanahalli Village, Kundana Hobli, Devanahalli Taluk, Bengaluru Rural District. bounded on: **East by :** Property belongs to Basapanna, **West by:** Property belongs to Munishamappa, **North by:** Remaining land, **South by:** Property belongs to Byrappa

Given under my hand and seal of the court on 31/07/2026

By order of the court, Chief Ministerial Officer, Senior Civil Judge & J.M.F.C., Court Devanahalli.

Sri. C. N. MADHU, Advocate
No.25, Padmavathi Complex, Bagaluru Village, Jala Hobli, Bengaluru North - 562149.
Ph: 9844331146

ತಾಲೂಕು ಅಧಿಕಾರಗಳ ಜತೆ ಶಾಸಕ ಬಾಲಕೃಷ್ಣ ಸಭೆ | ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ

ಕೊಳವೆ ಬಾವಿ ಅಗತ್ಯವಿದ್ದರೆ ಗಮನಕ್ಕೆ ತನ್ನಿ

ಸಂ.ಕ. ಸಮಾಚಾರ, ಮಾಗಡಿ

ತಾಲೂಕಿನಲ್ಲಿ ಮಳೆಯ ಕೊರತೆ ಇರುವುದರಿಂದ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಿ ಎಂದು ಶಾಸಕ ಹೆಚ್.ಸಿ.ಬಾಲಕೃಷ್ಣ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಕುಡಿಯುವ ನೀರಿನ ವಿಚಾರವಾಗಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ನೀರಿಗೆ ಯಾವುದೇ ತೊಂದರೆಯಾದರೆ ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯ್ತಿ ಸಹಾಯಕ ಕಾರ್ಯಪಾಲಕ ಅಭಿಯಂತರ ಮತ್ತು ನನ್ನ ಗಮನಕ್ಕೂ ತಂದು ಜರೂರಾಗಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ತಾಲೂಕಿನಲ್ಲಿ ಜಲಜೀವನ್ ಮಿಷನ್ ಯೋಜನೆಯ ಪ್ರಗತಿಯ ವರದಿಯನ್ನು ನೀಡಬೇಕು. ತಾಲೂಕು ಮಟ್ಟದ ಅಧಿಕಾರಿಗಳು ಆಗಿಂದಾಗ್ಗೆ ಸಭೆಗಳನ್ನು ಕರೆದು ಬೇಸಿಗೆ ಕಾಲ ಮುಗಿಯುವವರೆಗೂ ಎಚ್ಚರದಿಂದ ಕಾರ್ಯನಿರ್ವಹಿಸಿಬೇಕು. ಅಲ್ಲದೇ ಕೆಲ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಇರದೇ ಬೆಂಗಳೂರು ಮತ್ತು ತುಮಕೂರು ನಗರಗಳಿಂದ ಬರುತ್ತಿದ್ದಾರೆ ಎಂಬ ಮಾಹಿತಿಯಿದ್ದು ತಮ್ಮ ಗ್ರಾಪಂ ಮತ್ತು ತಾಲೂಕು ಮಟ್ಟದಲ್ಲಿ ಯಾವುದಾದರೂ ತಮ್ಮ ವ್ಯಾಪ್ತಿಯಲ್ಲಿ ತೊಂದರೆಯಾದರೆ ತಾವೇ ಆ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಬಾಲಕೃಷ್ಣ ಎಚ್ಚರಿಕೆ ನೀಡಿದರು.

ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವದಿಂದ ಕೊಳವೆ ಬಾವಿಗಳ ಅವಶ್ಯಕತೆ ಇದ್ದಲ್ಲಿ ನೇರವಾಗಿ ನನ್ನ ಗಮನಕ್ಕೆ ತನ್ನಿ, ನಾವು ಕ್ರಮವಹಿಸಿ ಶೀಘ್ರವಾಗಿ ಕೊಳವೆ ಬಾವಿಗಳನ್ನು ಕೊರೆಸಲು ಕ್ರಮವಹಿಸುತ್ತೇವೆ ಎಂದರು.

ಮಾಗಡಿ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕ ಹೆಚ್.ಸಿ.ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಜೊತೆಗೆ ಸಭೆ ನಡೆಯಿತು.

> ಗ್ರಾಮೀಣ ಭಾಗದಲ್ಲಿ ನೀರಿಗೆ ಯಾವುದೇ ತೊಂದರೆಯಾದರೆ ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯ್ತಿ ಸಹಾಯಕ ಕಾರ್ಯಪಾಲಕ ಅಭಿಯಂತರ ಮತ್ತು ನನ್ನ ಗಮನಕ್ಕೂ ತಂದು ಜರೂರಾಗಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.
> ▪ ಹೆಚ್.ಸಿ.ಬಾಲಕೃಷ್ಣ
> । ಶಾಸಕ

ತಾವು ಸಚಿವ ಸಂಪುಟಕ್ಕೆ ಸೇರುವಿರಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ಸಚಿವ ಸಂಪುಟ ಯಾವಾಗ ವಿಸ್ತರಣೆ ಆಗುತ್ತದೆಯೊ ನನಗೆ ಗೊತ್ತಿಲ್ಲ, ಆದರೆ ಸೋಮವಾರ ವಿಸ್ತರಣೆಯಾಗುತ್ತದೆ ಎಂದು ತಿಳಿದುಬಂದಿದೆ, ವಿರೋಧಪಕ್ಷದ ಟೀಕೆಗಳಿಂದ ಈ ರೀತಿ ಆಗುತ್ತಿದೆ, ಇದನ್ನು ಅವರು ಎದುರಿಸಬೇಕಾಗಬಹುದು, ಭಾಗಶಃ ಸೋಮವಾರ ಆಗಬಹುದು, ಪಟ್ಟಿ ಇನ್ನು ಹೈಕಮಾಂಡ್ ಬಳಿ ಇದೆ ಎಂದರು.

ಇಂದು ಕಾನ್ಸ್‌ಟೇಬಲ್ ಪರೀಕ್ಷೆ: ಕಠಿಣ ಕ್ರಮಕ್ಕೆ ಡೀಸಿ ಸೂಚನೆ

ಸಂ.ಕ. ಸಮಾಚಾರ, ರಾಮನಗರ

ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಮಿಕ್ಕುಳಿದ ವೃಂದದ 3395 ಹಾಗೂ ಸ್ಥಳೀಯ ವೃಂದದ 596 ಸಿವಿಲ್ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳ ನೇರ ನೇಮಕಾತಿಗೆ ಜಿಲ್ಲೆಯಲ್ಲಿ ಆಗಸ್ಟ್ 2ರ ಭಾನುವಾರ ಲಿಖಿತ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಯಾವುದೇ ಲೋಪದೋಷಗಳಿಗೆ ಆಸ್ಪದ ಕೊಡದಂತೆ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅವರು ನಗರದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಈ ಕುರಿತು ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ನೇಮಕಾತಿಯ ಈ ಲಿಖಿತ ಪರೀಕ್ಷೆಯು ಜಿಲ್ಲೆಯ 9 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಚನ್ನಪಟ್ಟಣದಲ್ಲಿ 2, ಬಿಡದಿಯಲ್ಲಿ 1 ಹಾಗೂ ರಾಮನಗರ ಟೌನ್‌ನಲ್ಲಿ ರಚಿಸಲಾಗಿರುವ 6 ಪರೀಕ್ಷಾ ಕೇಂದ್ರಗಳಲ್ಲಿ ಆಗಸ್ಟ್ 2ರ ಬೆಳಿಗ್ಗೆ 10 ಗಂಟೆಗೆ ಪರೀಕ್ಷೆ ಪ್ರಾರಂಭವಾಗಲಿದ್ದು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಮಚಂದ್ರಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮರಿಸ್ವಾಮಿ, ತಹಶೀಲ್ದಾರರು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು ಮೊದಲಾದವರಿದ್ದರು.

PUBLIC NOTICE

My clients intends to Purchase Agricultural land, morefully described in the schedule herein below from **MR.G.R. DARSHAN & RAKESH G R** both are son of **Mr.G.V RAVI,** who claim to be the absolute owners of the Schedule Property and apart from them, no other person have any right,title, interest & /or claim/s in or upon the Schedule Property. If any person/s has/have any claims, right, title and /or interest in or upon the same, the same may be intimated to me within 15 (Fifteen) days from the date of this publication along with documents in support thereof. If no tenable objections are received within the said period, my Client will proceed to complete the transaction,deeming that there are no claims or objections.

SCHEDULE PROPERTES

All that piece and parcel of Agricultural Land bearing Survey #54/2, abd 55.2 situated at Hosakotte village, Harohalli Hobli, Harohalli Taluk, Bangalore South District, measuring 1Acra 13 guntas and bounded on East by Mrs. Kempamma's land, West by Govt Road, North by Mr. Shivanna and Naganna Land and South By Mr. Shivanna s/o Manchaiah land.

Sd/-
H G SIDDALINGAIAH, BA LLB.,
ADVOCATE.
2,1st Cross, Chanappa Layout,
Kottigepalya, Magadi Road,
Bangalore - 560091

ಲಯನ್ಸ್ ಕ್ಲಬ್‌ನಿಂದ ಜನಪರ ಸೇವೆ ಮುಖ್ಯ:ಅಧ್ಯಕ್ಷ ಹರೀಶ್

ಸಂ.ಕ. ಸಮಾಚಾರ, ನಲ್ಲೂರು

ಲಯನ್ಸ್ ಕ್ಲಬ್ ಎಂದರೆ ಹೆಸರಿಗಷ್ಟೇ ಅಲ್ಲ ಹಲವಾರು ಸಾರ್ವಜನಿಕ ಸೇವೆಗಳನ್ನು ಮಾಡುವುದು ಅತಿ ಮುಖ್ಯ ಎಂದು ಲಯನ್ಸ್ ನೂತನ ಅಧ್ಯಕ್ಷರಾದ ಬಿ.ವಿ.ಹರೀಶ್ ಹೇಳಿದರು. ದೇವನಹಳ್ಳಿ ತಾಲೂಕು ಬೆಟ್ಟಕೋಟೆ ರಾಮಕೃಷ್ಣ ಗ್ರಾಮಾಂತರ ಪ್ರೌಢಶಾಲೆ ಆವರಣದಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಯನ್ಸ್ ಕ್ಲಬ್ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿ, ನಾವು ಲಯನ್ಸ್ ಕ್ಲಬ್‌ನಲ್ಲಿ ಪರಿಸರ ಉಳಿಸುವುದಕ್ಕೆ ಸಸಿ ನೆಡುವ ಕಾರ್ಯಕ್ರಮ, ಗ್ರಾಮೀಣ ಭಾಗದ ಜನರಿಗೆ ಆರೋಗ್ಯ ತಪಾಸಣೆ ಶಿಬಿರ, ರಕ್ತದಾನ ಶಿಬಿರ ಇನ್ನು ಮುಂತಾದ ಜನಪರ ಸೇವೆಗಳನ್ನು ಮಾಡುತ್ತಿದ್ದೇವೆ ಎಂದರು.

ಮುಖ್ಯ ಅತಿಥಿಗಳಾಗಿ ಲಯನ್ ಹುಲಿಕಲ್ ನಟರಾಜ್ ಮಾತನಾಡಿ, ಲಯನ್ಸ್ ಕ್ಲಬ್ ಎಂದರೆ ಸಾರ್ವಜನಿಕ ಸೇವೆಗಳಿಗೆ ಒಳ್ಳೆಯ ಅವಕಾಶ, ನಾವು ಮಾಡಿದ ಸಂಪಾದನೆಯಲ್ಲಿ ಸ್ವಲ್ಪ ಹಣವನ್ನಾದರೂ ಸಾರ್ವಜನಿಕ ಸೇವೆಗಳಿಗೆ ಬಳಸುವುದು ಲಯನ್ಸ್ ಕ್ಲಬ್‌ನ ಇತಿಹಾಸವಾಗಿದೆ ಎಂದರು. 2026–27ನೇ ಸಾಲಿನ ಅಧ್ಯಕ್ಷರಾದ ಬಿ.ವಿ.ಹರೀಶ್, ಬೆಟ್ಟಕೋಟೆ ಉಪಾಧ್ಯಕ್ಷರಾದ ಚನ್ನಕೇಶವ, ಎರಡನೇ ಉಪಾಧ್ಯಕ್ಷರಾದ ಕೆ.ಪ್ರಕಾಶ್, ಕಾರ್ಯದರ್ಶಿ ಮದನ್ ಗೋಪಾಲ್, ಖಜಾಂಚಿ ರಾಮಯ್ಯ, ವಿ. ಮುನಿಯಪ್ಪ, ಅಶ್ವಥ್ ನಾರಾಯಣಸ್ವಾಮಿ, ನರಸಿಂಹರೆಡ್ಡಿ, ಟಿ.ಕೆ. ಲಿಂಗಪ್ಪ, ಬಿ. ಮುನೇಗೌಡ, ಸಿ.ಜೆ. ತಮ್ಮೇಗೌಡ ಸೇರಿದಂತೆ ಹಲವರಿದ್ದರು.

ಹೊಸಕೋಟೆ ಟಿಎಪಿಸಿಎಂಎಸ್ ದೇಶಕ್ಕೇ ಮಾದರಿ: ಶಾಸಕ ಶರತ್

ಸಂ.ಕ. ಸಮಾಚಾರ, ಹೊಸಕೋಟೆ

ಹೊಸಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಇಡೀ ಭಾರತಕ್ಕೆ ಮಾದರಿಯಾಗಿದೆ ಎಂದು ಶಾಸಕರಾದ ಶರತ್ ಬಚ್ಚೇಗೌಡರವರು ತಿಳಿಸಿದರು.

ನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ 25–26ನೇ ಸಾಲಿನ 77ನೇ ವರ್ಷದ ಟಿಎಪಿಸಿಎಂಎಸ್ ಸರ್ವ ಸದಸ್ಯರ ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಇಂಜಿನಿಯರಿಂಗ್, ಉನ್ನತ ವ್ಯಾಸಂಗದಲ್ಲಿ ಅಧಿಕ ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದರು.

ಈ ಸಹಕಾರ ಸಂಘಕ್ಕೆ 2007–8ನೇ ಸಾಲಿನಲ್ಲಿ ಅತ್ಯುತ್ತಮ ಸಹಕಾರ ಸಂಘ ಎಂದು ರಾಜ್ಯ ಪ್ರಶಸ್ತಿ ಲಭಿಸಿದ್ದು, ಇದರ ಏಳಿಗೆಗಾಗಿ ಮಾಜಿ ಸಂಸದರಾದ ಬಚ್ಚೇಗೌಡರವರು ಚಿಕ್ಕೊಂಡಹಳ್ಳಿ ಬಳಿ 20, ಗುಂಟೆ, ಭಕ್ತಗೊಂಡನಹಳ್ಳಿ ಬಳಿ 2 ಎಕರೆ, ಇನ್ನೂ ನಮ್ಮ ಅವಧಿಯಲ್ಲಿ ಭಕ್ತಗೊಂಡನಹಳ್ಳಿ ಬಳಿ 3 ಎಕರೆ, ಹಾರೋಹಳ್ಳಿ ಬಳಿ 1.21 ಗುಂಟೆ ಒಟ್ಟಾರೆಯಾಗಿ 50 ಕೋಟಿ ರೂಗೂ ಹೆಚ್ಚು ಮಾಲ್ಯದ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಿಸಲಾಗಿದೆ ಎಂದರು. ಸಂಘದ ಅಧ್ಯಕ್ಷರಾದ ಕೋಡಿಹಳ್ಳಿ ಸುರೇಶ್, ಸಿ.ಇ.ಓ ಸೋಮಣ್ಣ ಮಾತನಾಡಿದರು. ಬಿ.ವಿ.ಬೈರೇಗೌಡ, ಸುಬ್ಬರಾಜು, ಗೋಪಾಲಗೌಡ, ಮುತ್ಕೂರು, ಮುನಿರಾಜು, ಎಸ್.ಡಿ.ರಮೇಶ್, ಬಾಬುರೆಡ್ಡಿ, ಹೆಚ್.ಎಸ್.ರವಿ, ಸುನೀಲ್, ಮಂಜುನಾಥ್, ನಾಗರಾಜ್, ಕೃಷ್ಣಪ್ಪ, ನಾರಾಯಣಪ್ಪ, ನಾರಾಯಣಸ್ವಾಮಿ, ಪಾರ್ವತಮ್ಮ, ಹಸೀನ್ ತಾಜ್, ವೆಂಕಟೇಶಪ್ಪ, ಆನಂದಾಚಾರಿ, ಸೋಮಣ್ಣ ಮೊದಲಾದವರಿದ್ದರು.

ರಸ್ತೆ ಬದಿಗಳಲ್ಲಿ ನಿಲ್ಲಿಸುತ್ತಿದ್ದ ವಾಹನಗಳಿಗೆ ವ್ಹೀಲ್ ಲಾಕ್

ಸಂ.ಕ. ಸಮಾಚಾರ, ದೊಮ್ಮಸಂದ್ರ

ಪಟ್ಟಣದಲ್ಲಿ ರಸ್ತೆ ಬದಿಗಳಲ್ಲಿ ದ್ವಿಚಕ್ರ ವಾಹನಗಳು, ಕಾರುಗಳು, ಇತರೆ ಭಾರೀ ವಾಹನಗಳನ್ನು ಎಲ್ಲೆಂದರಲ್ಲಿ ಸಂಚಾರ ನಿಯಮ ಉಲ್ಲಂಘಿಸಿ ಅಕ್ರಮವಾಗಿ ಪಾರ್ಕಿಂಗ್ ಮಾಡುತ್ತಿರುವವರ ವಿರುದ್ಧ ಆನೇಕಲ್ ಪೊಲೀಸರು ಕಠಿಣ ಕ್ರಮ ಕೈಗೊಂಡಿದ್ದಾರೆ.

ನಿಬಂಧನೆಗಳನ್ನು ಉಲ್ಲಂಘಿಸಿ ವಾಹನ ನಿಲುಗಡೆ ಮಾಡುತ್ತಿದ್ದ ವಾಹನಗಳ ಚಕ್ರಗಳಿಗೆ ವ್ಹೀಲ್ ಲಾಕ್ ಹಾಕುವ ಮೂಲಕ ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ. ಪಟ್ಟಣದ ಪ್ರಮುಖ ವೃತ್ತಗಳು ಮತ್ತು ಪ್ರಮುಖ ರಸ್ತೆಗಳಲ್ಲಿ ವಾಹನಗಳನ್ನು ಅಡ್ಡದಿಡ್ಡಿಯಾಗಿ ನಿಲ್ಲಿಸುವುದರಿಂದ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಹಾಗೂ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿತ್ತು, ಇದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಸುಗಮ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಈ ಕಠಿಣ ಕ್ರಮ ಕೈಗೊಂಡಿದ್ದಾರೆ.

ವಾಹನ ಸವಾರರು ಕಡ್ಡಾಯವಾಗಿ ನಿಗದಿತ ಪಾರ್ಕಿಂಗ್ ಸ್ಥಳಗಳಲ್ಲಿ ಮಾತ್ರ ತಮ್ಮ ವಾಹನಗಳನ್ನು ನಿಲ್ಲಿಸಬೇಕು, ರಸ್ತೆ ಬದಿಗಳಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವುದನ್ನು ತಪ್ಪಿಸಿ, ಪೊಲೀಸರೊಂದಿಗೆ ಸಹಕರಿಸಿ ಅನಗತ್ಯ ದಂಡದ ಹೊರೆಯಿಂದ ಪಾರಾಗುವಂತೆ ವಾಹನಗಳ ಮಾಲೀಕರುಗಳಿಗೆ ಪೊಲೀಸರು ಮನವಿ ಮಾಡಿದರು.

ಭಾರತೀಯ ಸ್ಟೇಟ್ ಬ್ಯಾಂಕ್
ಹೋಮ್ ಲೋನ್ ಸೆಂಟರ್
ನಂ. 117, ನೆಲಮಹಡಿ, ನೀಲ್ ರಾವ್ ಟವರ್ಸ್, ರಸ್ತೆ ನಂ. 3, ವೈಟ್‌ಫೀಲ್ಡ್ ರಸ್ತೆ, ಇಪಿಐಪಿ ಫೇಸ್ 1, ಬೆಂಗಳೂರು, ಕರ್ನಾಟಕ –560066.
ಇಮೇಲ್ : sbi.17753@sbi.co.in

ಸ್ವಾಧೀನ ಸೂಚನೆ ನಿಯಮ 8(1)ರ ಅಡಿಯಲ್ಲಿ (ಸ್ಥಿರಾಸ್ತಿಗಳಿಗಾಗಿ)

A/c No. HL/38518399540

ಈ ಕೆಳಸಹಿದಾರರು **ಭಾರತೀಯ ಸ್ಟೇಟ್ ಬ್ಯಾಂಕ್,** ಇದರ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಮತ್ತು ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರ ಮತ್ತು ಸದರಿ ನಿಯಮದ ಪ್ರಕರಣ 13(12) ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ನಿಯಮ 3ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ತಗಾದೆ ಸೂಚನೆಯನ್ನು ದಿನಾಂಕ : 11.05.2026** ರಂದು ನೀಡಲಾಗಿತ್ತು. **ಸಾಲಗಾರರಾದ : 1) ಶ್ರೀ ಸುರೇಶ್ .ಟಿ** ಬಿನ್ ಶ್ರೀ ಟಿ. ವೆಂಕಟೇಶ್ವರ ರಾವ್, ನಂ. 004, ಸಿ–88, 5ನೇ ಕ್ರಸ್, ಆಲ್ಫಾ ಗಾರ್ಡನ್, ದಿಯಾ ಅಕಾಡೆಮಿ ಆಫ್ ಲರ್ನಿಂಗ್ ಎದುರು, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಬೆಂಗಳೂರು–560036. **ಮತ್ತೊಂದು ವಿಳಾಸ : 1) ಶ್ರೀ ಸುರೇಶ್ .ಟಿ** ಬಿನ್ ಶ್ರೀ ಟಿ. ವೆಂಕಟೇಶ್ವರ ರಾವ್, ಸಿಐಎಸ್‌ಸಿಒ ಸಿಸ್ಟಮ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, SEZ, CESSSAN ಬಿಸಿನೆಸ್ ಪಾರ್ಕ್, ಸರ್ಜಾಪುರ, ಮಾರತ್ತಹಳ್ಳಿ ಹೊರ ವರ್ತುಲ ರಸ್ತೆ, ಬೆಂಗಳೂರು–560103. **2) ಶ್ರೀ ಸುರೇಶ್ .ಟಿ** ಬಿನ್ ಶ್ರೀ ಟಿ. ವೆಂಕಟೇಶ್ವರ ರಾವ್, ಎಫ್–2, 4ನೇ ಮಹಡಿ, 4ನೇ ಕ್ರಾಸ್, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಕೆ.ಆರ್. ಪುರಂ, ಬೆಂಗಳೂರು–560036. **3) ಶ್ರೀ ಸುರೇಶ್ .ಟಿ** ಬಿನ್ ಶ್ರೀ ಟಿ. ವೆಂಕಟೇಶ್ವರ ರಾವ್, ಅವೆಸ್ಟಾ ಕಂಪ್ಯೂಟರ್ ಪ್ರೈವೇಟ್ ಲಿಮಿಟೆಡ್, 3ನೇ ಮಹಡಿ, ಪಿಆರ್ ಬಿಸಿನೆಸ್ ಸೆಂಟರ್, ಸರ್ಜಾಪುರ ಹೊರ ವರ್ತುಲ ರಸ್ತೆ, ಬೆಂಗಳೂರು–560017. **4) ಶ್ರೀ ಸುರೇಶ್ .ಟಿ** ಬಿನ್ ಶ್ರೀ ಟಿ. ವೆಂಕಟೇಶ್ವರ ರಾವ್, "ಸಾನಿಯಾ ಗ್ರೀನ್ ಹೋಮ್ಸ್", ಫ್ಲಾಟ್ ನಂ. 004, ನೆಲಮಹಡಿ, ಕೊಡಿಗೇಹಳ್ಳಿ ಗ್ರಾಮ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು–560036 ಇವರಿಗೆ ನೀಡಲಾಗಿತ್ತು. ಮೇಲ್ಕಂಡ ಕಾಯಿದೆ ಅಡಿಯಲ್ಲಿ ಇವರಿಂದ ಬಾಕಿ ಇರುವ ಮೊತ್ತ **ರೂ. 22.07.044/– (ರೂಪಾಯಿ ಇಪ್ಪತ್ತೆರಡು ಲಕ್ಷದ ಏಳು ಸಾವಿರದ ನಲವತ್ತ ನಾಲ್ಕು ಮಾತ್ರ)** ದಿನಾಂಕ 08.05.2026 ರಂದು ಇದ್ದಂತೆ ಹಾಗೂ ಬಡ್ಡಿ ಮತ್ತು ಅದರ ಮೇಲಿನ ಸಾಂದರ್ಭಿಕ ಖರ್ಚು ವೆಚ್ಚಗಳನ್ನು ತಗಾದೆ ಸೂಚನೆ ತಲುಪಿದ 60 ದಿನಗಳೊಳಗೆ ಮರು ಪಾವತಿ ಮಾಡಲು ಸೂಚಿಸಲಾಗಿತ್ತು.

ಸಾಲಗಾರರು ತಗಾದೆ ಸೂಚನೆಯಲ್ಲಿ ತಿಳಿಸಿದ ಸಾಲದ ಹಣವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುವುದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರಿಟಿ ಇಂಟ್ರೆಸ್ಟ್ ಎನ್‌ಫೋರ್ಸ್‌ಮೆಂಟ್ ರೂಲ್ 2002ರ ಸದರಿ ನಿಯಮ 8 ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಆಸ್ತಿಯನ್ನು **ದಿನಾಂಕ 29.07.2026** ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಸಾಲಗಾರರು/ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್